# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀಮತಿ ಮಾಧುರಿ ಸಿ.ಮಾಯಾಚಾರಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಶೀಗಿಹಳ್ಳಿ ಗ್ರಾಮ ಪಂಚಾಯತಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ಶಿಫಾರಸ್ಸಿನನ್ವಯ ಕ್ರಮವಹಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 142 ಗ್ರಾಪಂಕಾ 2015, ದಿನಾಂಕ 01.04.2015
2) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ. ಉಪಲೋಕ್-1/ಡಿಇ-203/2015/ಎಆರ್ಇ-1, ದಿನಾಂಕ 09.12.2016
3) ಸರ್ಕಾರದ ಸಮಸಂಖ್ಯೆಯ ಎರಡನೇ ಕಾರಣ ಕೇಳಿ ನೋಟೀಸ್, ದಿನಾಂಕ 02.01.2017
4) ಶ್ರೀಮತಿ ಮಾಧುರಿ ಸಿ.ಮಾಯಾಚಾರಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಶೀಗಿಹಳ್ಳಿ ಗ್ರಾಮ ಪಂಚಾಯತಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಸಲ್ಲಿಸಿರುವ ಉತ್ತರ, ದಿನಾಂಕ 24.01.2017

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ ಶ್ರೀಮತಿ ಮಾಧುರಿ ಸಿ.ಮಾಯಾಚಾರಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಶೀಗಿಹಳ್ಳಿ ಗ್ರಾಮ ಪಂಚಾಯತಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ)ನಿಯಮಾವಳಿಗಳು 1957 ರ ನಿಯಮ 14(ಎ) ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ವಹಿಸಲಾಗಿತ್ತು. ಅದರಂತೆ ಅಪರ ನಿಬಂಧಕರು ವಿಚಾರಣೆಗಳು-11 ಕರ್ನಾಟಕ ಲೋಕಾಯುಕ್ತ ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

> "ಶೀಗಿಹಳ್ಳಿ ಗ್ರಾಮ ಪಂಚಾಯತಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅವಧಿಯಲ್ಲಿ ಶ್ರೀಮತಿ ಮಾಧುರಿ ಸಿ.ಮಾಯಾಚಾರಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಶೀಗಿಹಳ್ಳಿ ಗ್ರಾಮ ಪಂಚಾಯತಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ಹಾಗೂ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮತಿ ಪಡೆಯದೆ ರಸ್ತೆ ಬದಿ ಗಿಡ ನೆಡುವ ಕಾಮಗಾರಿ ಕೈಗೊಂಡು ಅವ್ಯವಹಾರ ಎಸಗಿದ್ದು, ಕ.ನಾ.ಸೇ.(ನಡತೆ) ನಿಯಮಗಳು 1966 ರ ನಿಯಮ 3(1)(i) ರ ಪ್ರಕಾರ ದುರ್ನಡತೆ ಎಸಗಿರುತ್ತಾರೆ."

ವಿಚಾರಣಾಧಿಕಾರಿಯವರು ಮಾನ್ಯ ಉಪಲೋಕಾಯುಕ್ತರಿಗೆ ವಿಚಾರಣಾ ವರದಿಯನ್ನು ಸಲ್ಲಿಸಿದ್ದು ಸದರಿ ವರದಿಯ ಅನುಸಾರ ಶ್ರೀಮತಿ ಮಾಧುರಿ ಸಿ.ಮಾಯಾಚಾರಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಶೀಗಿಹಳ್ಳಿ ಗ್ರಾಮ ಪಂಚಾಯತಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರ ವಿರುದ್ಧದ ಆರೋಪವು ಸಾಬೀತಾಗಿರುವುದೆಂದು ನಿರ್ಣಯಿಸಿರುತ್ತಾರೆ. ವಿಚಾರಣಾಧಿಕಾರಿಯವರ ನಿರ್ಣಯದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆ.

> The DGO Smt. Madhuri C.Mayachari, working as a PDO, Sheegihalli Grama Panchayath, Hanagal Taluk, Haveri District by taking approval from the Grama Panchayath, has illegally taken up excess work of planting trees on both sides of the Kere Angala Road without getting technical and administrative sanction from the higher officers and also without getting post-facto sanction from the Chief Executive Officer, ZP, Haveri and thereby the DGO has failed to maintained absolute integrity and devotion to duty and thus DGO is guilty of misconduct under rule 3(1)(i) to (iii) of KCS (conduct) Rules 1966.

ಈ ವರದಿಯ ಮೇಲೆ ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ದಿನಾಂಕ 09.12.2016 ರಂದು ಮಾಡಿರುವ ಶಿಫಾರಸ್ಸಿನಲ್ಲಿ "ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8 ರ ಅನುಸಾರ ಸದರಿಯವರ ಒಂದು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಮೇಲೆ ಓದಲಾದ (2) ರಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ನಿಯಮಾನುಸಾರ ಆರೋಪಿತ ನೌಕರರಿಗೆ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಮೇಲೆ ಓದಲಾದ (3) ರಲ್ಲಿ ಎರಡನೇ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿತ್ತು ಈ ನೋಟಿಸಿಗೆ ಸದರಿ ನೌಕರರು ಇವರು ದಿನಾಂಕ: 24.01.2017 ರಂದು ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ. ಸದರಿ ಲಿಖಿತ ಹೇಳಿಕೆಯಲ್ಲಿ ಅವರು ಸಲ್ಲಿಸಿರುವ ಆಕ್ಷೇಪಣೆಗಳು ಈ ಕೆಳಕಂಡಂತಿವೆ.

1) ಇಲಾಖಾ ವಿಚಾರಣೆಯಲ್ಲಿರುವ ಆರೋಪಕ್ಕೂ, ವಿಚಾರಣಾಧಿಕಾರಿಯವರ ನಿರ್ಣಯಕ್ಕೂ ತಾಳೆ ಹೊಂದುತ್ತಿಲ್ಲ.
2) ಆರೋಪವು ಅಸ್ಪಷ್ಟವಿದ್ದು, ವಿಚಾರಣೆಯು ನಿಯಮಬಾಹಿರವಾಗಿದೆ.
3) ಘಟನೋತ್ತರ ಅನುಮತಿ ಪಡೆಧ ನಂತರ, ಪೂರ್ವಾನುಮತಿ ಪಡೆಯದೆ ಅನುಷ್ಠಾನಗೊಳಿಸಿರುವ ಆರೋಪ ಮಾಡಲು ಅವಕಾಶ ಇರುವುದಿಲ್ಲ.
4) ವಿಚಾರಣಾಧಿಕಾರಿಯವರು ಎಂ.ಜಿ.ಎನ್.ಆರ್.ಇ.ಜಿ.ಎ. ಅಧಿನಿಯಮವನ್ನಾಗಲೀ, ನಿಯಮಗಳನ್ನಾಗಲೀ ಹಾಗೂ ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ನಾಗಲೀ ಪರಿಗಣಿಸದೆ, ಆರೋಪ ಸಾಬೀತಾಗಿದೆ ಎಂದು ನಿರ್ಣಯ ದಾಖಲಿಸಿರುವ ಬಗ್ಗೆ.
5) ದೂರುದಾರರು ಒಂಬುಡ್ಸ್‌ಮನ್‌ರವರಿಗೆ ದಿನಾಂಕ 18.01.2010 ರಂದು ದೂರು ಸಲ್ಲಿಸಿದ್ದು, ದಿನಾಂಕ 05.02.2011 ರಂದು ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿರುವ ದೂರಿನಲ್ಲಿ ನಿಜಾಂಶ ತಿಳಿಸಿರುವುದಿಲ್ಲ.
6) ದಿನಾಂಕ 07.08.2015 ರಂದು ಸಲ್ಲಿಸಿರುವ ಪ್ರತಿರಕ್ಷಣಾ ಹೇಳಿಕೆ ಹಾಗೂ ದಿನಾಂಕ 07.01.2016 ರಂದು ಸಲ್ಲಿಸಿರುವ ಲಿಖಿತವಾದದ ಅಂಶಗಳನ್ನು ಪರಿಗಣಿಸಲು ಕೋರಿರುತ್ತಾರೆ.
7) ಘಟನೋತ್ತರ ಅನುಮತಿ ನೀಡಿರುವ ಪ್ರಕರಣಗಳಲ್ಲಿ ನೀಡಿರುವ ಅನುಮತಿಯು ಕಾರ್ಯಾರಂಭ ಮಾಡುವ ಪೂರ್ವದಲ್ಲಿ ಅನ್ವಯವಾಗುತ್ತದೆ.
8) ಮಾನ್ಯ ಉಪಲೋಕಾಯುಕ್ತ ರವರ ದಂಡನೆಯ ಕುರಿತು ಮಾಡಿರುವ ಶಿಫಾರಸು ನ್ಯಾಯಾಲಯದ ತೀರ್ಪಿಗೆ ವ್ಯತಿರಿಕ್ತವಾಗಿದೆ.
9) ತೆಗೆದುಕೊಂಡಿರುವ ಕ್ರಮಗಳು ದುರ್ನಡತೆ ವ್ಯಾಪ್ತಿಗೆ ಬರುವುದಿಲ್ಲ. ನಾನು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಆಗಿ ನನ್ನ ಕರ್ತವ್ಯಗಳನ್ನು ನಿಮಾನುಸಾರ ನಿರ್ವಹಿಸಿರುತ್ತೇನೆ. ಒಂಬುಡ್ಸ್ ಮನ್‌ರವರ ಆದೇಶದಲ್ಲಿ ವಲಯ ಅರಣ್ಯಾಧಿಕಾರಿಗಳು (ಸಾಮಾಜಿಕ ಅರಣ್ಯ) ಹಾನಗಲ್ ಇವರ ಅಸಮರ್ಪಕ ನಿರ್ವಹಣೆ ಕಂಡುಬರುತ್ತದೆ ಎಂದು ಆದೇಶಿಸಲಾಗಿದೆ. ಘಟನೋತ್ತರ ಅನುಮತಿ ಪಡೆಯಲು ನನಗೆ ಸೂಚಿಸಿದ್ದು, ಘಟನೋತ್ತರ ಅನುಮತಿ ಪಡೆದಿರುತ್ತೇನೆ. ಆದ್ದರಿಂದ ಈ ಪ್ರಕರಣದ ಅಂಶಗಳಲ್ಲಿ ನನ್ನಿಂದ ಯಾವುದೇ ದುರ್ನಡತೆ ಇರುವುದಿಲ್ಲ. ಸರ್ವೋಚ್ಚ ನ್ಯಾಯಾಲಯವು (2012) 5 ಎಸ್.ಸಿ.ಸಿ. 242 ವಿಜಯ್‌ಸಿಂಗ್ ಮತ್ತು ಉತ್ತರ ಪ್ರದೇಶ ರಾಜ್ಯ ಮತ್ತಿತರರು ಇದರಲ್ಲಿ "charge of negligence, inadvertence or unintenstional acts would not culminate into case of doubtful integrity" ಮುಂದುವರೆದು ಅದೇ ತೀರ್ಪಿನಲ್ಲಿ "Misconduct – Generally – Held, it cannot be left to vagaries of employer to say ex post facto that some acts of omission or commission not enumerated in relevant rules, would nonetheless amount to misconduct."

ಮೇಲಿನ ತೀರ್ಪುಗಳು ಪ್ರಸ್ತುತ ಪ್ರಕರಣಕ್ಕೆ ಅನ್ವಯವಾಗುವುದು. ಆದ್ದರಿಂದ ವಿಚಾರಣಾ ವರದಿಯನ್ನು ತಿರಸ್ಕರಿಸಿ, ಆರೋಪದಿಂದ ದೋಷಮುಕ್ತಗೊಳಿಸಿ, ಆದೇಶ ಹೊರಡಿಸಲು ಕೋರಿರುತ್ತಾರೆ."

ಸದರಿ ಪ್ರಕರಣದ ಕುರಿತು ವಿಚಾರಣೆ ನಡೆಸಲು ಅಪರ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ ರವರು ಇಲಾಖಾ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದು, ಸದರಿ ನೌಕರರ ವಿರುದ್ಧದ ಆರೋಪಗಳು ಸಾಬೀತಾಗಿರುವುದಕ್ಕೆ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ವಿಚಾರಣಾ ವರದಿಯ ಪ್ರಮುಖ ಅಂಶಗಳನ್ನು ಈ ಕೆಳಕಂಡಂತೆ ಪುನರುಚ್ಚರಿಸಿದೆ:-

"13. DGO has not disputed the fact that Rs.77,000/- was spent for planting saplings by Sheegihalli GP, where she was working as PDO. The DGO also not disputed the fact that 171 saplings were planted on either side of the road leading to tank bed from hindu burial ground of Shankarikoppa village and no prior approval from the ZP was taken to plant the saplings on either side of the road. From the evidence produced in the case it is crystal clear that prior approval of the ZP, Hvaeri was obtained only to plant saplings in the burial ground area, but the DGO along with the concerned range Forest Officer, planted another 171 saplings outside the burials ground on either side of the road leading to tank bund from the burial ground. As pointed out supra, the DGO has contended that she obtained post facto approval from the CEO of ZP, Haveri as per EX.D-2. It is to be noted that the post facto sanction is accorded by the CEO of ZP on 09.01.2012, where as the planting of saplings was carried out during the year 2010. This makes it abundantly clear that no prior approval from the CEO of ZP, Haveri was obtained by the DGO before spending amount to plant saplings on either side of the road. Further it is clear that though estimate was prepared for planting saplings in burial ground required number of saplings could not be planted in the burial ground required. Hence, it is clear that the DGO has committed technical error in spending the funds of Panchyat for planting saplings on either side of the road without obtaining prior sanction from CEO of ZP, Haveri. Therefore, this is a serious fincancial irregularity committed by the DGO. he evidence on record shows that till the Ombudsman under MGNREG Scheme visited the spot to investigate the allegation, the DGO had not taken any steps to get the approval from CEO of ZP, haveri for deviating the work from burial grounf to either side of the road. Though the deocument at EX.D-2 produced by the DGO shows that post facto approval of the CEO is obtained by the DGO, in my opinion the DGO had committed financial irregularity in specding the amount without obtaining the prior sanction before spending the amount for digging pits and planting saplings on either side of the road from burial ground to tank bed in Shankarikoppa Village.

14. After careful scrutiny of the oral and documentary ecidence produced in the case, I am of the view that the disciplinary authority has clearly proved that the DGO while working as Panchayat Development Officer, Sheegihali Grama Panchayat, hanagal taluk, Haveri District has committed fincancial irregularity in

planting saplings in the place other than the place for which prior sanction from the CEO was obtained and had spent the amount without prior approval fromk CEO. Though, the DGO has obtained post subsequent to the investigation by Lokaykta, I am of the view that it will not absolve the DGO from committing technical and administrative irregularity committed in planting saplings on either side of the road. Therefore, The DGO has committed official misconduct as defined under rule 3(i) to (iii) of the KCS(Conduct) Rules 1957. Hence, I have answered the point formulated above in the affirmative and proceed to pass the following order."

ಸರ್ಕಾರವು ಪರಿಶೀಲಿಸಿ, ಈ ಹಿನ್ನೆಲೆಯಟಜಿಟು ಸದರಿ ನೌಕರರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರವನ್ನು ಅಂಗೀಕರಿಸಲು ಬರುವುದಿಲ್ಲ. ಮತ್ತು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪುವುದು ಸಮಂಜಸವೆಂದು ಕಂಡು ಬರುತ್ತದೆ. ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ ಶ್ರೀಮತಿ ಮಾಧುರಿ ಸಿ.ಮಾಯಾಚಾರಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಶೀಗಿಹಳ್ಳಿ ಗ್ರಾಮ ಪಂಚಾಯತಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8 ರಡಿಯಲ್ಲಿ ನಿರ್ದಿಷ್ಟಪಡಿಸಿದಂತೆ **"ಅವರ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ"** ದಂಡನೆ ವಿಧಿಸಲು ವಿಧಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 880 ಗ್ರಾಪಂಕಾ 2016, ಬೆಂಗಳೂರು, ದಿನಾಂಕ: 10.04.2018**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕು, ಶೀಗಿಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅವಧಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನದಲ್ಲಿ ಎಸಗಿದ ಕರ್ತವ್ಯಲೋಪ ಎಸಗಿರುವ ಹಿನ್ನೆಲೆಯಲ್ಲಿ, ಶ್ರೀಮತಿ ಮಾಧುರಿ ಸಿ.ಮಾಯಾಚಾರಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಶೀಗಿಹಳ್ಳಿ ಗ್ರಾಮ ಪಂಚಾಯತಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ-8 ರನ್ವಯ **"ಅವರ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ"** ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

15/4/19

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಅಪರ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಹಾವೇರಿ ಜಿಲ್ಲಾ ಪಂಚಾಯತಿ, ಹಾವೇರಿ.

6) ಕಾರ್ಯನಿರ್ವಾಹಕ ಅಧಿಕಾರಿ, ಹಾನಗಲ್ ತಾಲ್ಲೂಕು ಪಂಚಾಯತಿ, ಹಾನಗಲ್, ಹಾವೇರಿ ಜಿಲ್ಲೆ.
(ಸಂಬಂಧಿಸಿದ ನೌಕರರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸರ್ಕಾರಕ್ಕೆ ಸ್ವೀಕೃತಿ ಸಲ್ಲಿಸುವಂತೆ ಕೋರಿದೆ.)

7) ಶ್ರೀಮತಿ ಮಾಧುರಿ ಸಿ.ಮಾಯಾಚಾರಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಶೀಗಿಹಳ್ಳಿ ಗ್ರಾಮ ಪಂಚಾಯತಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ.

8) ಗಣಕಕೋಶ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ. – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.

9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.